**ಕರ್ನಾಟಕ ಸರ್ಕಾರ**

**ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು**

**2019–20ನೇ ಸಾಲಿನ ಬಿ.ಎಸ್.ಸಿ.ನರ್ಸಿಂಗ್, ಬಿ.ಪಿ.ಟಿ, ಬಿ.ಪಿ.ಒ. ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ರೆಗ್ಯೂಲರ್) ಪ್ರವೇಶಕ್ಕಾಗಿ**

**MOPUP ROUND (ಆಫ್‌ಲೈನ್) ಸೀಟು ಹಂಚಿಕೆ.**

ಮೊದಲನೇ ಹಾಗೂ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ /ಉಳಿದಿರುವ ಬಿ.ಎಸ್ಸಿ. ನರ್ಸಿಂಗ್ /ಬಿ.ಪಿ.ಟಿ/ ಬಿ.ಪಿ.ಒ / ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ರೆಗ್ಯೂಲರ್) ಸೀಟುಗಳ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆಫ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಈ ಕೆಳಗೆ ನೀಡಿರುವ ವೇಳಾ ಪಟ್ಟಿಯಂತೆ ನಡೆಸಲಾಗುವುದು. ಅಭ್ಯರ್ಥಿಗಳು ಆಫ್‌ಲೈನ್ ಅಂತಿಮ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈಗಾಗಲೇ ನೀಡಿರುವ ದಾಖಲಾತಿ ಪರಿಶೀಲನಾ ಚೀಟಿ ಹಾಗೂ ಪ್ರಕ್ರಿಯೆ ಶುಲ್ಕ ರೂ:300/– ಅನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು (**Director of Medical Education, Bangalore**)ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಬೆಂಗಳೂರಿನಲ್ಲಿ ಸಂದಾಯವಾಗುವಂತೆ) ತಪ್ಪದೇ ಹಾಜರು ಪಡಿಸಬೇಕು.

**ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಅರ್ಹತೆ:**

1. ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರಬೇಕು.
2. ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳು ಹಂಚಿಕೆಯಾಗದೇ ಇರವು ಅಭ್ಯರ್ಥಿಗಳು.
3. ಮೊದಲನೆ ಅಥವಾ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿದ್ದು ಕಾಲೇಜಿನಲ್ಲಿ ಪ್ರವೇಶ ಪಡೆಯದೇ ದಿನಾಂಕ: 02–11–2019 ದಿನಾಂಕದೊಳಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಸೀಟು ರದ್ದು ಪಡಿಸಿಕೊಂಡಿರುವವರು.
4. ಹೊಸದಾಗಿ ಆನ್‌ಲೈನ್ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ದಿನಾಂಕ:04–11–2019ರಂದು ದಾಖಲಾತಿ ಪರೀಶೀಲನೆ ನಂತರವೇ ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು.

**ಆಫ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಈ ವಿಧದ ಕೆಳಗಿನ ಆಭ್ಯರ್ಥಿಗಳಿಗೆ ಅರ್ಹತೆ ಇರುವುದಿಲ್ಲ:**

1. ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿದ್ದು ಕಾಲೇಜಿನಲ್ಲಿ ಪ್ರವೇಶ ಪಡೆದಿರುವವರು.
2. ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗಿ ಆಯಾ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲಾದವರು ಅಥವಾ ಹಂಚಿಕೆಯಾದ ಸೀಟನ್ನು ಪ್ರಾಧಿಕಾರದಲ್ಲಿ ರದ್ದುಪಡಿಸಿಕೊಳ್ಳದೇ ಇರುವ ಅಭ್ಯರ್ಥಿಗಳು.

**ಆಫ್‌ಲೈನ್ ಸೀಟು ಹಂಚಿಕೆಯ ವಿವರಗಳು:**

1. ಸರ್ಕಾರದ ನಿರ್ದೇಶನದಂತೆ, ಎರಡನೇ ಸುತ್ತಿನ ಸೀಟು ಹಂಚಿಕಯ ನಂತರ ಉಳಿದಿರುವ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯನ್ನು ನಡೆಸಲಾಗುವುದು.
2. ಆಫ್‌ಲೈನ್ ಸೀಟು ಹಂಚಿಕೆ MOPUP ROUND (**ಆಫ್‌ಲೈನ್**) ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದಾದರು ಸೀಟುಗಳು ರದ್ದುಗೊಂಡರೆ ಅಂತಹ ಸೀಟುಗಳನ್ನು ಆಯಾ ಪ್ರವರ್ಗದಲ್ಲಿಯೆ ಹಂಚಿಕೆಗೆ ಪರಿಗಣಿಸಲಾಗುವುದು.
3. ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯಂತೆ ಎರಡನೇ ಸುತಿನ ಸೀಟು ಹಂಚಿಕೆಯ ನಂತರ ರದ್ದುಗೊಂಡಿರುವ / ಉಳಿದಿರುವ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು. ನಂತರ ಸೀಟುಗಳು ಉಳಿದಲ್ಲಿ de-categorise ಮಾಡಿ ಹಂಚಿಕೆ ಮಾಡಲಾಗುವುದು.
4. ಈ ಸುತ್ತಿನಲ್ಲಿ ಆಯ್ಕೆ ಮಾಡಿಕೊಳ್ಳುವ ಸೀಟಿಗೆ ಸ್ಥಳದಲ್ಲಿಯೆ ಪ್ರಕ್ರಿಯೆ ಶುಲ್ಕವನ್ನು ಪಾವತಿಸಿ ದಿನಾಂಕ: 08–11–2019 ರೊಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.

| **ಹೊಸದಾಗಿ ನೊಂದಣಿ ಹಾಗೂ ದಾಖಲಾತಿ ಪರಿಶೀಲನೆಗೆ ಮತ್ತೊಂದು ಅವಕಾಶ** |
|---|
| ಬಿ.ಎಸ್.ಸಿ ನರ್ಸಿಂಗ್/ ಬಿ.ಪಿ.ಟಿ./ ಬಿ.ಪಿ.ಒ / ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇದ್ದ ಅಭ್ಯರ್ಥಿಗಳು ದಿನಾಂಕ: **26–10–2019 ರಿಂದ 31–10–2019ರವರೆಗೆ** ಅರ್ಜಿ ಸಲ್ಲಿಸಬಹುದು. |
| ಬಿ.ಎಸ್ಸಿ. ನರ್ಸಿಂಗ್/ ಬಿ.ಪಿ.ಟಿ./ ಬಿ.ಪಿ.ಒ / ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು (ಇನ್ನೊಮ್ಮೆ ಆನ್‌ಲೈನ್ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ) ಹಾಗೂ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿರುವ ಅಭ್ಯರ್ಥಿಗಳೂ ಸಹ **ದಿನಾಂಕ:04–11–2019ರಂದು ಬೆ.11.00 ರಿಂದ ಮ.1.00ರ** ಅವಧಿಯಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಹಾಜರಾಗಬಹುದಾಗಿದೆ. **(ಈಗಾಗಲೇ ಪ್ರಕಟಿಸಿರುವ ಮಾಹಿತಿ ಪುಸ್ತಕದಲ್ಲಿ(Information bulletin) ತಿಳಿಸಿರುವ ಅಗತ್ಯ ದಾಖಲೆಗಳನ್ನು ದಾಖಲಾತಿ ಪರಿಶೀಲನೆ ಸಮಯದಲ್ಲಿ ಖಡ್ಡಾಯವಾಗಿ ಹಾಜರುಪಡಿಸಬೇಕು)** |

**ಬಿ.ಎಸ್.ಸಿ.ನರ್ಸಿಂಗ್, ಬಿ.ಪಿ.ಟಿ, ಬಿ.ಪಿ.ಒ. ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ (ರೆಗ್ಯೂಲರ್) ಪ್ರವೇಶಕ್ಕಾಗಿ MOPUP ROUND (ಆಪ್‌ಲೈನ್) ಸೀಟು ಹಂಚಿಕೆಯ ವೇಳಾಪಟ್ಟಿ–2019**

| ಕ್ರ. ಸಂ. | ಕೋರ್ಸ್‌ಗಳ ವಿವರಗಳು | ದಿನಾಂಕ | ಎಲ್ಲಾ ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ (SC,ST,Cat-I,2A,2B,3A,3B,PWD) ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) | ಸಾಮಾನ್ಯ ವರ್ಗ ಮತ್ತು ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ ಸಮಯ (ರ್‍ಯಾಂಕ್ 1 ರಿಂದ ಕೊನೆ ರ್‍ಯಾಂಕ್‌ವರೆಗೆ) |
|---|---|---|---|---|
| 01. | ಬಿ.ಎಸ್ಸಿ ನರ್ಸಿಂಗ್ / ಬಿ.ಪಿ.ಟಿ / ಬಿ.ಪಿ.ಒ /ಬಿ.ಎಸ್ಸಿ ಅಲೈಡ್ ಹೆಲ್ತ್ ಕೋರ್ಸ್‌ಗಳಿಗೆ (ರೆಗ್ಯೂಲರ್) (ಆಪ್‌ಲೈನ್ ಕೌನ್ಸಲಿಂಗ್‌ಗೆ ವರದಿ ಮಾಡಿಕೊಳ್ಳುವ ಸಮಯ: ಬೆ:8.30) | 05–11–2019 | ಬೆಳಗ್ಗೆ :9.00 ರಿಂದ ಮದ್ಯಾಹ್ನ 1.00ರವರೆಗೆ | ಮದ್ಯಾಹ್ನ 1.30 ರಿಂದ |
| 02. | ಆಯ್ಕೆ ಮಾಡಿಕೊಂಡ ಕಾಲೇಜಿಗೆ ಅಭ್ಯರ್ಥಿಗಳು ಕಾಲೇಜಿಗೆ ವರದಿ ಮಾಡಿಕೊಳ್ಳುವ ಕೊನೆಯ ದಿನಾಂಕ | 08–11–2019, 4.00PM | | |

Sd/-
Director, Medical Education

Date: 25.10.2019

Place: Bangalore.